ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ 1828/2014

ಚಾಸಾ:5 ಪ್ರಾಸಾಃ4

ದಿನಾಂಕಃ 06.12.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ದಿನೇಶ |
| ತಂದೆಯ ಹೆಸರು | : | ಬಸವ ಪೂಜಾರಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಮನೆ ಕೆಲಸ |
| ವಾಸ ಸ್ಥಳ | : | ಹಲ್ತೂರು, ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ನ್ಯಾಯಾಲಯದಿಂದ,**

ಸಾಕ್ಷಿಗೆ ಆರೋಪಿ ದಸ್ತಗಿರಿ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದಾಖಲೆಯನ್ನು ನಿಪಿ.3 ಎಂದು, ಸಾಕ್ಷಿ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಯಾವಾಗ ಮತ್ತು ಎಲ್ಲಿ ಹಾಗೂ ಯಾವ ಕಾರಣಕ್ಕಾಗಿ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ಸದ್ರಿ ದಾಖಲೆಯಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಆರೋಪಿತರ ಪರಿಚಯ ಇದೆ. ನನ್ನ ಸಮಕ್ಷಮ ಅವರನ್ನು ಪೊಲೀಸರು ಬಂಧಿಸಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 09.05.2014 ರಂದು ಕೋಟಾ ಪೊಲೀಸರು 1 ರಿಂದ 4ನೇ ಆರೋಪಿತರನ್ನು ತಮ್ಮ ಮನೆಯಿಂದ ಬಂಧಿಸುವ ವೇಳೆಗೆ ನಾನು ಹಾಜರಿದ್ದು, ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4.00 ಗಂಟೆಯವರೆಗೆ ಜರುಗಿಸಿ ಅವರನ್ನು ವಶಕ್ಕೆ ಪಡೆದು ನಿಪಿ.3ಕ್ಕೆ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಸದ್ರಿ ಕ್ರಮವನ್ನು ನನ್ನ ಸಮಕ್ಷಮ ಜರುಗಿಸಿದರೂ ಆರೋಪಿತರು ನಮ್ಮ ಗ್ರಾಮಸ್ಥರಾಗಿದ್ದು, ಪರಿಚಯ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**